ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ , ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ3(7) ಪ್ರಾ.ಶಿ ವರ್ಗ.ವೈತ:02/2015-16 ದಿನಾಂಕ: 07.08.2015

**ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳು** **ಅತಿ ತುರ್ತು**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ವಿಷಯ:**-ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ [ಪತಿ ಅಥವಾ ಪತ್ನಿ, ಮಕ್ಕಳು] ಅವಲಂಬಿತರ ಪ್ರಕರಣಗಳಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಬಗ್ಗೆ ವಿಭಾಗ ಮಟ್ಟದ ತ್ರಿ ಸದಸ್ಯಸಮಿತಿಗೆ ಶಿಕ್ಷಕರನ್ನು ತಪಾಸಣೆಗೆ ಹಾಜರುಪಡಿಸಿ ವೈದ್ಯಕೀಯ ಪ್ರಮಾಣ ಪತ್ರದ ಸತ್ಯಾಸತ್ಯತೆಯ ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ

**ಉಲ್ಲೇಖ:**-1. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿ.ವರ್ಗಾ01/2015-16,ದಿ.26.06.2015

2. ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ ಆನಂದರಾವ್ ವೃತ್ತ ಬೆಂಗಳೂರು ರವರ ಪತ್ರ ಸಂಖ್ಯೆ- ಎಂಡಿಎಸ್ (2)/117/2015-16, ದಿನಾಂಕ:04.08.2015

—*****—

2015-16ನೇ ಸಾಲಿನಲ್ಲಿ ಅಂತರ ಘಟಕ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ತೀವ್ರತರ ಖಾಯಿಲೆ ಪ್ರಕರಣದಲ್ಲಿ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಖಾಯಿಲೆಗಳಿಗೆ ) ಹಾಗೂ ಅಂಗವಿಕಲ ಶಿಕ್ಷಕರು ದಿನಾಂಕ:11.08.2015 ರಿಂದ ದಿ.14.08.2015 ರ ಒಳಗಾಗಿ ಆಯಾ ವಿಭಾಗದ ಜಿಲ್ಲೆಗಳಿಂದ ಅರ್ಜಿ ಸಲ್ಲಿಸಿರುವ ಶಿಕ್ಷಕರು ಆಯಾ ವಿಭಾಗದಿಂದಲೇ ವಿಭಾಗೀಯ ಮಟ್ಟದ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗಲು (ಉಪನಿರ್ದೇಶಕರು ಸಾ.ಶಿ.ಇ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ) ಶಿಕ್ಷಕರಿಗೆ ದೂರವಾಣಿ ಮೂಲಕ ಸೂಚಿಸುವುದು. ಮತ್ತು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

ಉಲ್ಲೇಖ (2)ರನ್ವಯ ಮಾನ್ಯ ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ರವರು ಆಯಾ ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ವರದಿ ನೀಡಲು ಸೂಚಿಸಿರುತ್ತಾರೆ.(ಪ್ರತಿ ಲಗತ್ತಿಸಿದೆ.)

ಆಯಾ ವಿಭಾಗದಿಂದ ಶಿಕ್ಷಕರು ಆಯಾ ವಿಭಾಗದ ನಿರ್ದೇಶಕರ ಕಛೇರಿಯ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು. ಸದರಿ ಆಯುಕ್ತಾಲಯದಿಂದ ಜಿಲ್ಲಾ ಆಸ್ಪತ್ರೆಗೆ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿ ವೈದ್ಯಕೀಯ ತಪಾಸಣೆ ನಡೆಸಲು ಅಗತ್ಯಕ್ರಮ ವಹಿಸುವುದು. ತಪಾಸಣೆ ಮುಗಿದ ನಂತರ ಯಾವ ವಿಭಾಗಕ್ಕೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೋ ಆ ವಿಭಾಗದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸುವುದು. ಹಾಗೂ ವಿಭಾಗಮಟ್ಟದ ವೈದ್ಯಕೀಯ ಮಂಡಳಿಯು ತಪಾಸಣೆ ಮಾಡಿದ ನಂತರ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಂಬಂಧಿಸಿದ ಆಯುಕ್ತಾಲಯದಿಂದ ಕಳುಹಿಸಿ ಕೊಡಲು ತಿಳಿಸಿದೆ.

7/8/15

ಆಯುಕ್ತರು

**ಸಾರ್ವಜನಿಕ ಶಿಕ್ಷಣ ಇಲಾಖೆ**

ಗೆ,

1, ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರ್ಗಿ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2, ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ (ಬೆಳಗಾವಿ) ಧಾರವಾಡ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3, ರಾಜ್ಯದ ವಿಭಾಗೀಯ ಸಹ ನಿರ್ದೇಶಕರು, ಸಾ,ಶಿ.ಇ ಬೆಂಗಳೂರು/ ಮೈಸೂರು/ ಧಾರವಾಡ/ಕಲಬುರ್ಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4 ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ ಸಾ,ಶಿ.ಇ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ನಿರ್ದೇಶಕರು ಆಯುಕ್ತರ ಕಛೇರಿ ಸಾ,ಶಿ.ಇ ಕಲಬುರ್ಗಿ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6 ನಿರ್ದೇಶಕರು ಆಯುಕ್ತರ ಕಛೇರಿ ಸಾ,ಶಿ.ಇ ಧಾರವಾಡ (ಬೆಳಗಾವಿ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಭಾಪತಿಯವರಿಗೆ ವೈದ್ಯಕೀಯ ಮಂಡಳಿ, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು,/ ಕೆ.ಆರ್.ಆಸ್ಪತ್ರೆ ಮೈಸೂರು, ಜಿಲ್ಲಾ ಆಸ್ಪತ್ರೆ ಬೆಳಗಾವಿ, /ಜಿಲ್ಲಾ ಆಸ್ಪತ್ರೆ ಕಲಬುರ್ಗಿ ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ
8, ಕಛೇರಿ ಪ್ರತಿ.

E:\EST3 Backup\EST3\trns circu.doc

P.T.O

ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ ಬೆಂಗಳೂರು- 09**

ಸಂಖ್ಯೆ:ಎಂ.ಡಿ.ಎಕ್ಸ್(2) / 117/2015-16 ದಿನಾಂಕ: 04-08-2015

**E.M.S.**

ರವರಿಗೆ,

ಸಭಾಪತಿಯವರಿಗೆ ವೈದ್ಯಕೀಯ ಮಂಡಳಿ,
ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು
ಕೆ.ಆರ್.ಆಸ್ಪತ್ರೆ, ಮೈಸೂರು
ಜಿಲ್ಲಾ ಆಸ್ಪತ್ರೆ ಬೆಳಗಾಂ
ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾ

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ (ಪತಿ ಅಥವಾ ಪತ್ನಿ, ಮಕ್ಕಳು) ಅವಲಂಭಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಲು ಮತ್ತು ವಿಭಾಗ ಮಟ್ಟದ ತ್ರಿ-ಸದಸ್ಯ ಸಮಿತಿ ರಚಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಲು ನಿರ್ದೇಶನ ನೀಡುವಂತೆ ಕೋರಿ

ಉಲ್ಲೇಖ:- ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂ:
ಸಿ3(7)ಪ್ರಾ.ಶಿ:ವರ್ಗ:ವೈ.ತ:02/2015-16, ದಿ:24-07-2015
ಸಂಖ್ಯೆ:ಸಿ3(7)ಪ್ರಾ.ಶಿ:ವರ್ಗ:ವೈ.ತ:02/2015-16, ದಿ: 24-07-2015

*********

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿಕ್ಷಕರ ವರ್ಗಾವಣೆ ನಿಯಮಗಳಲ್ಲಿ ಅತ್ಯಂತ ತೀವ್ರತರಹದ ಖಾಯಿಲೆ (TERMINALLY ILL) ಗಳಿಗೆ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹೆಚ್.ಐ.ವಿ. ಖಾಯಿಲೆಗಳಿಗೆ ಮಾತ್ರ) / ಶಿಕ್ಷಕರಿಗೆ / ಅವಲಂಭಿತರಿಗೆ / ಅಂಗವಿಕಲಶಿಕ್ಷಕರಿಗೆ / ವಿಭಾಗಿಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ತಪಾಸಣೆ ನಡೆಸಿ, ತೀವ್ರತರ ಖಾಯಿಲೆಯಿಂದ ಬಳಲುತ್ತಿರುವ / ಶಿಕ್ಷಕರಿಗೆ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ನೀಡಿ ಸದರಿ ವೈದ್ಯಕೀಯ ವರದಿಗಳ ಸತ್ಯಾಸತ್ಯತೆಯನ್ನು ಮತ್ತು ಖಾಯಿಲೆಯ ಸ್ವರೂಪವನ್ನು ಮರು ಪರಿಶೀಲಿಸಿ ದೃಢೀಕರಿಸುವಂತೆ ಉಲ್ಲೇಖ ಕೋರಿರುತ್ತಾರೆ. (ಪತ್ರದ ಪ್ರತಿಗಳನ್ನು ಲಗತ್ತಿಸಿದೆ.)

ಆದುದರಿಂದ ಸದರಿ ಶಿಕ್ಷಕರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮರು ಪರಿಶೀಲಿಸಿ ವೈದ್ಯಕೀಯ ತಪಾಸಣೆಗೊಳಪಡಿಸಿ ಸಲ್ಲಿಸಿರುವ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯ ಬಗ್ಗೆ, ಮತ್ತು ಖಾಯಿಲೆಯ ಬಗ್ಗೆ ವರದಿಯನ್ನು ನೀಡಲು ಕೋರಲಾಗಿದೆ. ನೌಕರರಿಗೆ / ಅವಲಂಭಿತರಿಗೆ ಆಯಾ ವಿಭಾಗಿಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ಉಲ್ಲೇಖ ಪತ್ರದಲ್ಲಿ ಸೂಚಿಸಿರುವಂತೆ ಆರೋಗ್ಯ ತಪಾಸಣೆಗೊಳಪಡಿಸಿ ವರದಿಯನ್ನು ಆದ್ಯತೆಯ ಮೇಲೆ, ಜರೂರಾಗಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ಕಳುಹಿಸಲು ಸೂಚಿಸಿದೆ.

ಸಹ ನಿರ್ದೇಶಕರು(ವೈದ್ಯಕೀಯ)
ಆರೋಗ್ಯ ಮತ್ತು ಕು ಕ ಸೇವೆಗಳು,
ಬೆಂಗಳೂರು.

ಪ್ರತಿಯನ್ನು:-
1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01